

# ಕ್ರೌರ್ಯದ ಮೆರವಣಿಗೆಯಲ್ಲಿ ಉಡುಗಿದ ಒಳದನಿ

ಒಳಿತು ಕೆಡುಕಿನ ನಡುವಣ ಹೋರಾಟದ ಎಳೆಯನ್ನು ಹೊಂದಿರುವ ಈ ಕಿರುಚಿತ್ರದ ಒಳದನಿಯನ್ನು ಕ್ರೌರ್ಯದ ಅಟ್ಟಹಾಸವೇ ನುಂಗಿಹಾಕಿದೆ.

■ ಗೌರಿ



**ಹೆಸರು:** 'ಅದ್ವೈತ'
**ನಿರ್ದೇಶನ:** ಮನ್ವರ್ ರಾಣ
**ನಿರ್ಮಾಣ:** ಯಜುವೇಂದರ್ ರಾವತ್
**ಛಾಯಾಗ್ರಹಣ:** ಆಶಿಶ್ ರಾಣ
**ತಾರಾಗಣ:** ಕ್ರಿಸ್ ಭಾರ್ತಿ, ಮುಖೇಶ್ ಲಖ್ವಾ, ಅಂಕಿತಾ ಗುಸ್ಸೈನ್, ಅಕ್ಷತ್

'ಸಮಸ್ಯೆಗಳನ್ನು ಎಷ್ಟು ಹೆಚ್ಚು 'ಡಾರ್ಕ್' ಆಗಿ ತೋರಿಸುತ್ತೇವೆಯೋ ಅದು ಅಷ್ಟು ಪರಿಣಾಮಕಾರಿಯಾಗುತ್ತದೆ' ಎಂಬ ಮಿಥ್ಯೆ ಎಲ್ಲ ಕಲಾಮಾಧ್ಯಮಗಳಲ್ಲಿಯೂ ಯಾವಾಗಿನಿಂದಲೂ ಇದ್ದೇ ಇದೆ. ಸಿನಿಮಾ ಮಾಧ್ಯಮದಲ್ಲಿಯಂತೂ ಅದು 'ಬ್ಲ್ಯಾಕ್ ಆ್ಯಂಡ್ ವೈಟ್' ಕಥೆಗಳ ಜನಪ್ರಿಯ ಸಿದ್ಧಸೂತ್ರವಾಗಿಬಿಟ್ಟಿದೆ. ಹಿಂಸೆ, ಸೆಕ್ಸ್, ಕ್ರೌರ್ಯಗಳ ಅತಿಶಯದ ವೈಭವೀಕರಣವೂ ಈ ಸೂತ್ರದ ಅವಿಚ್ಛಿನ್ನ ಭಾಗವಾಗಿಬಿಟ್ಟಿದೆ. ಹೀಗಾಗಿಯೇ ನಮ್ಮ ಬಹುತೇಕ ಜನಪ್ರಿಯ ಸಿನಿಮಾಗಳ ನಾಯಕರು ನೂರಾರು ಜನರ ರುಂಡ ಚೆಂಡಾಡಿ ಒಬ್ಬ ಮನುಷ್ಯನನ್ನು ಉಳಿಸಿ 'ಹೀರೊ' ಅನಿಸಿಕೊಳ್ಳುತ್ತಾರೆ. ಶಾಂತಿಯ ಕುರಿತ ಸಂದೇಶ ಹೇಳುವ ಸಿನಿಮಾಗಳುದ್ದಕ್ಕೂ ಕ್ರೌರ್ಯದ ಮೆರವಣಿಗೆಯೇ ಇರುತ್ತದೆ.

'ಗುರಿ'ಯನ್ನು ದಾರಿಯೇ ನುಂಗಿಹಾಕುವ ವಿಪರ್ಯಾಸವಿದು. ಗಂಗಾನದಿಯ ಪುಣ್ಯಸ್ನಾನದ ಪಾವಿತ್ರ್ಯವನ್ನು ಹೇಳುವುದಕ್ಕೋಸ್ಕರ ದಾರಿಯುದ್ದಕ್ಕೂ ಪಾಪಗಳನ್ನು ಮಾಡುತ್ತ ಹೋಗುವ ವೈರುಧ್ಯವಿದು. ಇಂಥ ಸಲಕರಣೆಗಳ ಮೂಲಕ ಹೇಳಿದ ಸಂದೇಶ, ಮನಸ್ಸಿನಲ್ಲಿ ಕೂಡುವುದಿಲ್ಲ. ಬದಲಿಗೆ ತಾನೇ ಒಂದು ರೋಗಾಣುವಾಗಿ ಮನಸ್ಸನ್ನು ರೋಗಗ್ರಸ್ತವಾಗಿಸುತ್ತದಷ್ಟೆ.

ಮನ್ವರ್ ರಾಣ ನಿರ್ದೇಶನದ 'ಅದ್ವೈತ' ಕಿರುಚಿತ್ರ ಇಂಥ ವಿಪರ್ಯಾಸಕ್ಕೆ ಒಂದು ಉದಾಹರಣೆ ನೋಡಬಹುದು. ಈ ಕಿರುಚಿತ್ರದ ಹೆಸರಿಗೂ, 'ಅಹಂ ಬ್ರಹ್ಮಾಸ್ಮಿ' ಎಂಬ ಅಡಿಟಿಪ್ಪಣಿಗೂ ಚಿತ್ರದ ಹೂರಣಕ್ಕೂ ಸಂಬಂಧ ಕಲ್ಪಿಸುವುದು ದುಸ್ಸಾಧ್ಯ.

'ನಮ್ಮ ಮನಸ್ಸಿನೊಳಗೆ ರಾಮ ಮತ್ತು ರಾವಣ ಇಬ್ಬರೂ ಇರುತ್ತಾರೆ. ಮನದೊಳಗಣ ದ್ವೇಷ, ಅಸೂಯೆ, ಸಿಟ್ಟು, ಕೋಪಗಳೇ ರಾವಣ. ಪ್ರೀತಿ, ಸ್ನೇಹ, ಕರುಣೆಯಂಥ ಗುಣಗಳೇ ರಾಮ. ಈ ರಾಮ ರಾವಣ ಇಬ್ಬರೂ ನಮ್ಮೊಳಗೆ ಯಾವಾಗಲೂ ಹೊಡೆದಾಡುತ್ತಲೇ ಇರುತ್ತಾರೆ' ಅಮ್ಮ ಮಗನಿಗೆ ಹೇಳುವ ಮಾತಿಗೆ ಮಗ ಕೇಳುತ್ತಾನೆ, 'ಆ ಹೋರಾಟದಲ್ಲಿ ಯಾರು ಗೆಲ್ಲುತ್ತಾರೆ?' ಇದಕ್ಕೆ ಉತ್ತರ ತಕ್ಷಣ ದೊರೆಯುವುದಿಲ್ಲ. ಅದನ್ನು ತಿಳಿಯಲು ಈ ಕಥೆ ನೋಡಿ ಎಂಬ ರೀತಿಯಲ್ಲಿ ಕಥೆಯನ್ನು ಮುಂದುವರಿಸುತ್ತಾರೆ ನಿರ್ದೇಶಕರು. ಆದರೆ ಆ ಕಥೆಯ ಎಳೆಯೇ ಎಷ್ಟು ಬ್ಲ್ಯಾಕ್ ಆ್ಯಂಡ್ ವೈಟ್ ಆಗಿದೆಯೆಂದರೆ ಉತ್ತರ ಆಗಲೇ ವೀಕ್ಷಕನಿಗೆ ತಿಳಿದುಬಿಡುತ್ತದೆ. ಕುತೂಹಲದ ಬಳ್ಳಿ ಅಲ್ಲಿಯೇ ಸತ್ತು ಬೀಳುತ್ತದೆ.

ಒಬ್ಬ ಸೈಕೋ ತಂದೆ, ಪರಮಮುಗ್ಧ ಮಗನ ಮುಖಾಮುಖಿ. ಮಗ, ರಾಮನ ವೇಷ ಧರಿಸಿ ಭಿಕ್ಷೆ ಬೇಡುವವನು. ತಂದೆ ರಿಕ್ಷಾ ಇಟ್ಟುಕೊಂಡು ಎಳೆವಯಸ್ಸಿನ ಹುಡುಗಿಯನ್ನು ಅಪಹರಿಸಿ ತಂದವನು. ಈ ಇಬ್ಬರ ಜಗಳದಲ್ಲಿ ಯಾರು ಗೆಲ್ಲುತ್ತಾರೆ? ಸಂದೇಶದ ಬಿಳಲು ಹಿಡಿದು ನೇತಾಡುತ್ತಿರುವ ಕಥೆ ಎಷ್ಟು ಓಲಾಡಿದರೂ ಕೊನೆಗೆ ಅದೇ ನೆಲಕ್ಕೇ ಇಳಿಯಬೇಕಲ್ಲವೇ? ಎಳೆ ಹುಡುಗಿಯ ಮೇಲೆ ಅತ್ಯಾಚಾರ ಎಸಗಲು ಹೊರಟ ಕಾಮುಕ ತಂದೆಯನ್ನು ಮಗ ಕೊಲ್ಲುವಲ್ಲಿ ಚಿತ್ರ ಕೊನೆಗೊಳ್ಳುತ್ತದೆ. ಇಷ್ಟಕ್ಕೆ ಇನ್ನೇನೋ ಧ್ವನಿಯಲ್ಲಿ ಸೇರಿಸಲು ಹೆಣಗುವ ನಿರ್ದೇಶಕರು, ಫ್ಲ್ಯಾಶ್ ಬ್ಯಾಕ್‌ನಲ್ಲಿ ಅಮ್ಮನ ಬಾಯಿಯಲ್ಲಿ ಹೀಗೆ ಹೇಳಿಸುತ್ತಾರೆ: 'ರಾಮ–ರಾವಣರ ಯುದ್ಧದಲ್ಲಿ ನಾವು ಯಾರ ಪರ ನಿಲ್ಲುತ್ತೇವೆಯೋ ಅವರೇ ಗೆಲ್ಲುತ್ತಾರೆ'.

ಇದೊಂದು ಸಂದೇಶ ಹೇಳಲೋಸುಗ ಇಪ್ಪತ್ತು ನಿಮಿಷಗಳ ಕಿರುಚಿತ್ರದಲ್ಲಿ ನಿರ್ದೇಶಕರು ಕ್ರೌರ್ಯಪೂರಿತ ಜನಪ್ರಿಯ ದಾರಿಯನ್ನೇ ಆಯ್ದುಕೊಂಡಿದ್ದಾರೆ. ಮೇಲ್ನೋಟಕ್ಕೆ ಮಹಿಳೆಯ ಮೇಲಿನ ಲೈಂಗಿಕ ಶೋಷಣೆಯ ಕುರಿತಾದ ಚಿತ್ರ ಇದು ಅನಿಸಿದರೂ, ಅದನ್ನು ಸೂಕ್ಷ್ಮವಾಗಿ ಹೇಳುವ ಕಲಾವಂತಿಕೆಯೂ ಚಿತ್ರದಲ್ಲಿ ಕಾಣುವುದಿಲ್ಲ. ಅಬ್ಬರದಲ್ಲಿ ಅಡಗಿಹೋದ ಮೆಲುದನಿಯಂತೆ ಈ ಚಿತ್ರದಲ್ಲಿ ಬರುವ ಇಬ್ಬರು ಹೆಣ್ಣುಮಕ್ಕಳು ನೋಡುಗರ ಒಳಗಣ್ಣಿಗೆ ಬ್ಲರ್ ಆಗಿಯೇ ಉಳಿದುಬಿಡುತ್ತಾರೆ. ಚಿತ್ರದ ಬಹುತೇಕ ಭಾಗ ಒಂದು ಕತ್ತಲಕೋಣೆಯಲ್ಲಿಯೇ ನಡೆಯುತ್ತದೆ. ಆದರೆ ಆ ಕತ್ತಲೆ ಕೋಣೆ, ಅಲ್ಲಿನ ದೀಪದ ಬೆಳಕನ್ನು ಮನುಷ್ಯನ ಸ್ವಭಾವಗಳ ರೂಪಕವಾಗಿಸಿಕೊಳ್ಳುವ ಅದ್ಭುತ ಸಾಧ್ಯತೆಯನ್ನು ಛಾಯಾಗ್ರಾಹಕರು ಪೂರ್ತಿ ಕೈಚೆಲ್ಲಿದ್ದಾರೆ. ಕ್ರೂರಿ ತಂದೆ ವಿಕ್ಷಿಪ್ತವಾಗಿ ಉಣ್ಣುವುದು, ಒಳ ಉಡುಪುಗಳನ್ನು ಧರಿಸಿ ವಿಚಿತ್ರವಾಗಿ ಕುಣಿಯುವುದನ್ನು ದಾಖಲಿಸಲಿಕ್ಕಷ್ಟೇ ಅವರ ಕ್ಯಾಮೆರಾ ಶಕ್ತವಾಗಿದೆ.

ಈ ಅತಿರೇಕದ ಕಾರಣದಿಂದಲೇ ಇದು, ಸಾಮಾನ್ಯ ಮಹಿಳೆಯ ಬದುಕಿನ ಕಥೆ ಅನಿಸುವುದಿಲ್ಲ. ಬದಲಿಗೆ ಆ ಕ್ಷಣದ ಅಮಲು ಕೊಡುವ ಕ್ಷುಲ್ಲಕ ಮನರಂಜನೆಯ ಮಾದಕಪದಾರ್ಥದ ಹಾಗೆ ಭಾಸವಾಗುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2mbcFF0 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.